ಮಂಗಳವಾರ,21 ಜನವರಿ 2025, ಮೈಸೂರು

ವಿಜಯ ಕರ್ನಾಟಕ VK

# ಎಟಿಎಂಇಯಲ್ಲಿ ಜಲ್ಲಿ, ಮರಳು, ಇಟ್ಟಿಗೆ ಗುಣಮಟ್ಟ ಪರೀಕ್ಷೆಗೆ ಮಾನ್ಯತೆ

**ಮೈಸೂರು:** ದೊಡ್ಡ ಕಟ್ಟಡಗಳು, ರಸ್ತೆ ನಿರ್ಮಾಣ ವೇಳೆ ಜಲ್ಲಿ, ಮರಳು, ಇಟ್ಟಿಗೆ ಸೇರಿದಂತೆ ಬಳಸುವ ಹಲವು ವಸ್ತುಗಳ ಗುಣಮಟ್ಟ ಪರೀಕ್ಷೆ ಪ್ರಮಾಣಪತ್ರ ಸಲ್ಲಿಸುವುದು ಕಡ್ಡಾಯ. ಅಂತಹ ಸುಮಾರು 50 ಪರೀಕ್ಷೆ ನಡೆಸಿ ಪ್ರಮಾಣ ಪತ್ರ ನೀಡಲು ಎಟಿಎಂಇ ಎಂಜಿನಿಯರಿಂಗ್ ಕಾಲೇಜಿಗೆ ಮಾನ್ಯತೆ ದೊರೆತಿದೆ ಎಂದು ಪ್ರಾಂಶುಪಾಲ ಡಾ.ಎಲ್.ಬಸವರಾಜು ಹೇಳಿದರು.

''ಪರೀಕ್ಷೆ ನಡೆಸುವುದಕ್ಕೆ ಸಂಬಂಧಿಸಿದಂತೆ ಮಾನ್ಯತೆ ನೀಡುವ ರಾಷ್ಟ್ರೀಯ ಪ್ರಯೋಗಾಲಯಗಳ ಪರೀಕ್ಷೆ ಮತ್ತು ಮಾಪನಾಂಕ(ಎನ್ಎಬಿಎಲ್) ಸಂಸ್ಥೆಯಿಂದ ತಮ್ಮ ಕಾಲೇಜು ಪ್ರಮಾಣಪತ್ರ ಪಡೆದಿದೆ. ಹೀಗಾಗಿ ಮುಡಾ, ಖಾಸಗಿ, ಲೋಕೋಪಯೋಗಿ ಮೊದಲಾದ ಇಲಾಖೆಗಳು ಮಾತ್ರವಲ್ಲದೆ, ಪಿಎಚ್‌ಡಿ ಅಧ್ಯಯನದಲ್ಲಿ ತೊಡಗಿರುವವರು ತಮಗೆ ಅಗತ್ಯವಾದ ಪ್ರಮಾಣಪತ್ರವನ್ನು ನಮ್ಮ ಕಾಲೇಜಿನಲ್ಲಿ ನಡೆಯುವ ಪರೀಕ್ಷೆಯಲ್ಲಿ ಪಾಲ್ಗೊಂಡು ಪಡೆಯಬಹುದಾಗಿದೆ,'' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

''ಇತ್ತೀಚಿನ ದಿನಗಳಲ್ಲಿ ಬಹು ಮಹಡಿ ಕಟ್ಟಡ ನಿರ್ಮಾಣ ಸಾಮಾನ್ಯ ಸಂಗತಿಯಾಗಿದೆ. ಈ ವೇಳೆ ಮಣ್ಣು ಹಾಗೂ ಬಳಸುವ ಇತರೆ ಪದಾರ್ಥಗಳ ಗುಣಮಟ್ಟ ಕಳಪೆ ಆಗಿದ್ದರೆ ಅವು ಕುಸಿಯಲಿವೆ. ಜತೆಗೆ ರಸ್ತೆಗಳ ನಿರ್ಮಾಣ ವೇಳೆಯೂ ಇದನ್ನು ಗಮನಿಸದಿದ್ದರೆ ರಸ್ತೆ ಬೇಗ ಹಾಳಾಗುತ್ತವೆ. ಹೀಗಾಗಿ ಈ ರೀತಿಯ ಪರೀಕ್ಷೆಗಳು ಅನಿವಾರ್ಯ. ಆದ್ದರಿಂದ ಅಗತ್ಯವುಳ್ಳವರು ಈ ಸೌಲಭ್ಯ ಬಳಸಿಕೊಳ್ಳಬಹುದಾಗಿದೆ,'' ಎಂದು ಮಾಹಿತಿ ನೀಡಿದರು.

ಅಧ್ಯಾಪಕ ಚಂದ್ರಶೇಖರ್, ಪ್ರೊ. ಮನು ವಿಜಯ್, ಡಾ. ಸಚ್ಚಿದಾನಂದಮೂರ್ತಿ ಇದ್ದರು.